5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 110/2021

ದಿನಾಂಕ ಃ 08.08.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ:10 ಪಿ. ಡಬ್ಲ್ಯೂ:7

| | |
|---|---|
| ಸಾಕ್ಷಿದಾರರ ಹೆಸರು | ವಸೀಂ ಅಕ್ರಮ್ |
| ತಂದೆಯ ಹೆಸರು | ಮೊಹಮ್ಮದ್ ಅಸ್ಲಾಂ |
| ವಯಸ್ಸು | 30 ವರ್ಷ |
| ಉದ್ಯೋಗ | ಎಲೆಕ್ಟ್ರಿಕಲ್ ವ್ಯಾಪಾರಿ |
| ವಾಸ | ನಾಗಮಂಗಲ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದ್ದು, ಸದರಿ ದಾಖಲೆಯನ್ನು ನಿಪಿ.4 ಎಂದು, ಮತ್ತು ಸಹಿಯನ್ನು ನಿಪಿ.4(ಎ)ಎಂದು ಗುರತಿಸಲಾಯಿತು. ನಿಪಿ.4 ಅಮಾನತ್ತು ಮಹಜರ್ ಆಗಿರುತ್ತದೆ. ನಿಪಿ.4 ಕ್ಕೆ ಸಹಿಯನ್ನು ನಾಗಮಂಗಲ ಪೊಲೀಸ್ ಠಾಣೆಯಲ್ಲಿ ಸುಮಾರು 3 ರಿಂದ 4 ವರುಷಗಳ ಹಿಂದೆ ಮಾಡಿದ್ದೆನು. ಪೊಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ, ಸಹಿ ಮಾಡಿದ್ದೆನು. ನಾನು ಸಹಿ ಮಾಡುವಾಗ ಪೊಲೀಸ್ ಠಾಣೆಯಲ್ಲಿ ಯಾರು ಯಾರು ಇದ್ದರು ಅಂತ ಜ್ಞಾಪಕ ಇಲ್ಲ, ಸಾಕ್ಷಿಯು ಮುಂದುವರೆದು, ಪಬ್ಲಿಕ್ ಇದ್ದರು ಎನ್ನುತ್ತಾರೆ. ಯಾವ ವಿಚಾರಕ್ಕೆ ಪೊಲೀಸರು ಸಹ ಮಾಡಿಸಿಕೊಂಡಿದ್ದರು ಎಂದು ಗೊತ್ತಿಲ್ಲ.

2) ನಾನು ನೋಡುತ್ತಿರುವ ಫೋಟೋದಲ್ಲಿ ಹೀರೊ ಹೊಂಡಾ splendour ದ್ವಿಚಕ್ರ ವಾಹನ ಇದೆ. ಸದರಿ ಪೋಟೋವನ್ನು ನಿಪಿ.5 ಎಂದು ಗುರುತಿಸಲಾಯಿತು. ಸದರಿ ಹೀರೊ ಹೊಂಡಾ splendour ದ್ವಿಚಕ್ರ ವಾಹನದ ಹಿಂಭಾಗದ ಭಾಗ ಇರುವ ಇನ್ನೊಂದು ಪೋಟೋವನ್ನು ನೋಡುತ್ತಿದ್ದು, ಅದನ್ನು ನಿಪಿ.6 ಎಂದು ಗುರುತಿಸಲಾಯಿತು. ನಿಪಿ.5 ಫೋಟೋದಲ್ಲಿ ಬೈಕ್ ನ ಪಕ್ಕದಲ್ಲಿ ನಿಂತಿರುವ ವ್ಯಕ್ತಿ ಯಾರು ಎಂದು ಗೊತ್ತಿಲ್ಲ. ಹೀರೊ ಹೊಂಡಾ splendour ದ್ವಿಚಕ್ರ ವಾಹನವನ್ನು, ನಾಗಮಂಗಲದ ಮೈಸೂರು ರಸ್ತೆಯಲ್ಲಿ ನೋಡಿದ್ದೇನೆ. ಸದರಿ ಹೀರೋ ಹೊಂಡಾ

ಯಾರದು ಅಂತ ಗೊತ್ತಿಲ್ಲ. ಸದರಿ ಹೀರೋ ಹೊಂಡಾವನ್ನು ಯಾರು ಉಪಯೋಗಿಸುತ್ತಿದ್ದರು ಎಂದು ನಾನು ನೋಡಿರುವುದಿಲ್ಲ.

3) ಚಾಸಾ.11 ಇಸ್ರಾಲ್ ಪಾಷಾ ಗೊತ್ತಿಲ್ಲ. ನಾನು ಸಹಿ ಮಾಡಿದ ಮಹಜರ್ ನಲ್ಲಿ ಏನು ಬರವಣಿಗೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ಇಮ್ದಾದ್ ಪಾಷಾ ಮತ್ತು 3 ನೇ ಆರೋಪಿ ನಿಷಾದ್ ಖಾನ್ ರವರನ್ನು ಈ ಹಿಂದೆ ನಾಗಮಂಗಲದ ಮೈಸೂರು ರೋಡ್ ನಲ್ಲಿ ನೋಡಿದ್ದೇನು.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ಆರೋಪಿತರು, ನನ್ನ ದೊಡ್ಡಪ್ಪ ಮತ್ತು ದೊಡ್ಡಪ್ಪನ ಮಕ್ಕಳು ಎಂದರೆ ಸರಿ. ನಿಪಿ.5 ಮತ್ತು 6 ರ ಫೋಟೋದಲ್ಲಿ ಇರುವ ಬೈಕ್ ನ್ನು 3 ನೇ ಆರೋಪಿಯಾದ ನಿಷಾದ್ ಖಾನ್ 2015-16 ಇಸವಿಯಲ್ಲಿ ಬಳಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 7 ರಿಂದ 8 ವರುಷಗಳ ಹಿಂದೆ ನಾನು ಮೊಬೈಲ್ ಅಂಗಡಿ ಒಂದರಲ್ಲಿ ನಾನು ಕೆಲಸ ಮಾಡಿಕೊಂಡಿದ್ದೆನು ಎಂದರೆ ಸರಿ. ಚಾಸಾ.1 ಅಫೀಜ್ ಉಲ್ಲಾ ಮತ್ತು ಚಾಸಾ.2 ಆಸೀಫ್ ನನಗೆ ಗೊತ್ತಿಲ್ಲ. ನಾನು ಮೊಬೈಲ್ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದ ಸಮಯದಲ್ಲಿ, ಅಂಗಡಿಯವರಿಗೂ ಮತ್ತು ಚಾಸಾ.1 ಅಫೀಜ್ ಉಲ್ಲಾ ನಡುವೆ ಜಗಳವಾಗಿತ್ತು ಎಂದರೆ, ಸಾಕ್ಷಿಯು, ಆ ದಿವಸ ಇರಲಿಲ್ಲ ಎನ್ನುತ್ತಾರೆ.ಆ ನಂತದರಲ್ಲಿ, ಚಾಸಾ.1 ಅಫೀಜ್ ಉಲ್ಲಾ ರವರು, ಅವರ ಮೊಬೈಲ್ ನ್ನು, ನನ್ನ ಮೂಲಕ ರಿಪೇರಿಗೆ, ನಾನು ಕೆಲಸ ಮಾಡುತ್ತಿದ್ದ ಅಂಗಡಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಮೊಬೈಲ್ ನ್ನು, ಅಂಗಡಿಯಲ್ಲಿ ನಾನು ಹೇಳಿದ ರೀತಿಯಲ್ಲಿ, ರಿಪೇರಿ ಮಾಡಿ, ಹೇಳಿದ ದಿನಾಂಕದಲ್ಲಿ ವಾಪಸ್ಸು ಕೊಡದೇ ಇದ್ದುದಕ್ಕೆ, ನನಗೂ ಮತ್ತು ಚಾಸಾ.1 ಅಫೀಜ್ ಉಲ್ಲಾ ರವರಿಗೂ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ. ಆ ಕಾರಣದಿಂದ, ಆವತ್ತಿನಿಂದ ನನ್ನ ಮತ್ತು ಚಾಸಾ.1 ಅಫೀಜ್ ಉಲ್ಲಾ ರವರ ಮಧ್ಯೆ ಸಂಬಂಧ ಚೆನ್ನಾಗಿ ಇರುವುದಿಲ್ಲ ಎಂದರೆ ಸರಿ.

2) ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು ದಿಃ06.09.2016 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಆ ದಿನ ನಾನು ಸಹಿ ಮಾಡುವ ಸಮಯದಲ್ಲಿ, ಪೋಲೀಸ್ ಠಾಣೆಯಲ್ಲಿ ಚಾಸಾ.11 ಮತ್ತು 3 ನೇ ಆರೋಪಿ ನಿಷಾದ್ ಖಾನ್ ಇದ್ದರು ಎಂದರೆ ನಾನು ನೋಡಿಲ್ಲ. ಆ ಸಮಯದಲ್ಲಿ 3 ನೇ ಆರೋಪಿ ನಿಷಾದ್ ಖಾನ್ ರವರು, ನಿಪಿ. 5 ಮತ್ತು 6 ಪೊಟೊದಲ್ಲಿ ಇರುವ ವಾಹನವನ್ನು ತೋರಿಸಿ, ಇದೇ ವಾಹನದಲ್ಲಿ, ನಾನು, 1 ಮತ್ತು 2 ನೇ ಆರೋಪಿತರು, ಗಲಾಟೆಯಾದ ಸ್ಥಳಕ್ಕೆ ಹೋಗಿದ್ದೆವು ಎಂದು ಹೇಳಿದರು ಎಂದರೆ ಗೊತ್ತಿಲ್ಲ. ಆಗ ಪೊಲೀಸರು, ಸದರಿ ವಾಹನವನ್ನು ನನ್ನ ಸಮಕ್ಷಮದಲ್ಲಿ ಅಮಾನತ್ತು ಪಡಿಸಿಕೊಂಡು, ಪಂಚನಾಮೆಯನ್ನು ಬರೆದು, ಅದಕ್ಕೆ ನನ್ನ ಸಹಿಯನ್ನು ತೆಗೆದುಕೊಂಡಿದ್ದರು ಎಂದರೆ ಸಾಕ್ಷಿಯು, ನನಗೆ ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿದೆನು ಎಂದು ನುಡಿಯುತ್ತಾರೆ. ನಿಪಿ.4 ಪಂಚನಾಮೆಯನ್ನು ಬರೆಯುವುದಕ್ಕೆ ಮುಂಚೆ, ಚಾಸಾ.1 ಅಫೀಜ್ ಉಲ್ಲಾ ಗೆ ಆರೋಪಿತರು ಹಲ್ಲೆ ಮಾಡಿದ ವಿಚಾರವನ್ನು, ಪೊಲೀಸರು ನನಗೆ ತಿಳಿಸಿದರು ಎಂದರೆ ಸರಿಯಲ್ಲ, ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

3) ಈ ದಿವಸ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬರಬೇಕು ಅಂತ, 3 ನೇ ಆರೋಪಿ ನಿಷಾದ್ ಖಾನ್ ನನಗೆ ಫೋನ್ ಮಾಡಿ ತಿಳಿಸಿದ್ದರು ಮತ್ತು ನನ್ನ ಅಂಗಡಿಯ ಹತ್ತಿರ ಬಂದಿದ್ದರು. ನಾಗಮಂಗಲದಿಂದ ನಾನು 3 ನೇ ಆರೋಪಿ ನಿಷಾದ್ ಖಾನ್ ನೊಂದಿಗೆ, ಅವರ ಕಾರಿನಲ್ಲಿ ನ್ಯಾಯಾಲಯಕ್ಕೆ ಬಂದಿದ್ದೇನೆ. ನಾಗಮಂಗಲದಿಂದ ಮಂಡ್ಯಕ್ಕೆ ಕಾರಿನಲ್ಲಿ ಬರುತ್ತಿರುವಾಗ, ಸದರಿ ಕೇಸಿನ ಬಗ್ಗೆ, ಯಾವ ರೀತಿ ನಾನು ಸಾಕ್ಷಿ ಹೇಳಬೇಕು ಅಂತ 3 ನೇ ಆರೋಪಿ ನಿಷಾದ್ ಖಾನ್ ಯೊಂದಿಗೆ ಚರ್ಚೆ ಮಾಡಿದ್ದೆನು ಎಂದರೆ ಸರಿಯಲ್ಲ. ಬೆಳಿಗ್ಗ ಅಂಗಡಿ ಹತ್ತಿರ, 3 ನೇ ಆರೋಪಿ ನಿಷಾದ್ ಖಾನ್ ಬಂದಿದ್ದಾಗ, ಮಂಡ್ಯಕ್ಕೆ ಹೋಗಬೇಕು, ಕೋರ್ಟಿನ ಹತ್ತಿರ ಅಂದಿದ್ದರು. ನಾನು ಇದೇ ಮೊದಲನೇ ಸಲ ಸಾಕ್ಷಿಯಾಗಿ ಕೋರ್ಟ್ ಗೆ ಸಾಕ್ಷಿ ಹೇಳಲು ಬಂದಿದ್ದೇನೆ. ಬೇರೆ ಯಾವುದೇ ಕೇಸ್ ನಲ್ಲಿ ಕೋರ್ಟಿಗೆ ಬಂದಿಲ್ಲ. ಇದೇ ಮೊದನೇ ಬಾರಿಗೆ ಸಾಕ್ಷಿಯಾಗಿ ನಾನು ಕೋರ್ಟ್ ಗೆ ಸಾಕ್ಷಿ ಹೇಳಲು ಬಂದಿರುವುದರಿಂದ, ಕೋರ್ಟಿನಲ್ಲಿ ಯಾವ ರೀತಿ ಸಾಕ್ಷಿ ಹೇಳಬೇಕು ಎಂಬ ವಿಷಯವನ್ನು, ನಾನು, 3 ನೇ ಆರೋಪಿ ನಿಷಾದ್ ಖಾನ್ ಯಿಂದ ತಿಳಿದುಕೊಂಡಿದ್ದೆನು ಎಂದರೆ ಸರಿಯಲ್ಲ. 3 ನೇ ಆರೋಪಿ ನಿಷಾದ್ ಖಾನ್ ನನಗೆ ಹೇಳಿಕೊಟ್ಟಿರುವ ರೀತಿಯಲ್ಲಿ, ಈ ಪ್ರಕರಣದ ಬಗ್ಗೆ ಮತ್ತು ಪಂಚನಾಮೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಅಂತ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ತಿಳಿಸಲಾದ ಘಟನೆ ಮತ್ತು ನಿಪಿ.4 ರ ಬಗ್ಗೆ

ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗಳು ನನ್ನ ಸಂಬಂಧಿಕರಾಗಿರುವುದರಿಂದ, ಅವರಿಗೆ ಸಹಾಯ ಮಾಡಲು ಮತ್ತು ಅವರಿಗೆ ತೊಂದರೆಯಾಗಬಾರದು ಎಂಬ ಕಾರಣದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಡಿ ಎಂ ಎಂ ವಕೀಲರಿಂದ ಃ</u>**

1) ನನಗೆ ಕನ್ನಡ ಓದಕ್ಕೆ ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. ಪೊಲೀಸರು, ಇಂತಹ ಕಡೆ ಸಹಿ ಮಾಡು ಅಂತ ತಿಳಿಸಿದ್ದರಿಂದ, ನಾನು ನಿಪಿ.4 ರಲ್ಲಿ ಸಹಿ ಮಾಡಿದ್ದೆನು ಎಂದರೆ ಸರಿ. ಪೊಲೀಸರು, ನಿಪಿ.4 ರಲ್ಲಿ ಬರೆದಿದ್ದ ವಿಚಾರವನ್ನು ನನಗೆ ಓದಿ ಹೇಳಲಿಲ್ಲ ಅಥವಾ ಏನು ವಿಚಾರ ಬರೆದಿದೆ ಎಂದು ಅವರನ್ನು ಕೇಳಲಿಲ್ಲ. ಪೊಲೀಸರು, ನನ್ನ ಮುಂದೆ ಯಾವುದೇ ವಾಹನವನ್ನು ನಿಲ್ಲಿಸಿ, ಅದನ್ನು ತೋರಿಸಿ, ಅಮಾನತ್ತು ಮಾಡುತ್ತಿದ್ದೇವೆ ಎಂದು ಹೇಳಿ ಫೋಟೋವನ್ನು ತೆಗೆದಿರಲಿಲ್ಲ ಎಂದರೆ ಸರಿ. ನಿಪಿ.5 ಮತ್ತು 6 ಫೋಟೋದಲ್ಲಿ ಇರುವ ಮೋಟಾರ್ ಬೈಕ್ ಯಾರದು, ಯಾರಿಗೆ ಸಂಬಂಧಪಟ್ಟಿದೆ ಮತ್ತು ಅದರ ಮಾಲೀಕರು ಯಾರು ಎಂದು ಗೊತ್ತಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.